# ಕನ್ನಡ ವಿಶ್ವವಿದ್ಯಾಲಯ, ಹಂಪಿ
## ವಿದ್ಯಾರಣ್ಯ-೫೮೩ ೨೭೬

## ಜನವರಿ ೨೯, ೨೦೧೯ರ ಮಂಗಳವಾರದಂದು ನಡೆದ ಕಾರ್ಯಕಾರಿ ಸಮಿತಿಯ ೧೯೯ನೇ ಸಭೆಯ ನಡೆವಳಿಗಳು

**ಸಭೆಯಲ್ಲಿ ಉಪಸ್ಥಿತರಿದ್ದವರು:**

| | |
|---|---|
| ೦೧. ಡಾ. ಮಲ್ಲಿಕಾ. ಎಸ್. ಘಂಟಿ, ಮಾನ್ಯ ಕುಲಪತಿಗಳು, ಕ.ವಿ.ಹಂ. | : ಅಧ್ಯಕ್ಷರು |
| ೦೨. ಡಾ. ಎ. ಸುಬ್ಬಣ್ಣ ರೈ, ಡೀನ್, ಭಾಷಾ ನಿಕಾಯ, ಕವಿಹಂ | : ಸದಸ್ಯರು |
| ೦೩. ಡಾ. ಸ.ಚಿ.ರಮೇಶ್, ಡೀನ್, ಸಮಾಜ ವಿಜ್ಞಾನಗಳ ನಿಕಾಯ, ಕವಿಹಂ | : ಸದಸ್ಯರು |
| ೦೪. ಡಾ. ಅಶೋಕಕುಮಾರ ರಂಜೇರೆ, ಡೀನ್, ಲಲಿತಕಲೆಗಳ ನಿಕಾಯ, ಕವಿಹಂ | : ಸದಸ್ಯರು |
| ೦೫. ಡಾ. ಸಿ.ಮಹಾದೇವ, ಡೀನ್, ವಿಜ್ಞಾನಗಳ ನಿಕಾಯ, ಕವಿಹಂ | : ಸದಸ್ಯರು |
| ೦೬. ಡಾ. ಸಿದ್ಧಗಂಗಮ್ಮ, ಹಣಕಾಸು ಅಧಿಕಾರಿಗಳು, ಕವಿಹಂ | : ವಿಶೇಷ ಆಹ್ವಾನಿತರು |
| ೦೭. ಡಾ. ಅಶೋಕಕುಮಾರ ರಂಜೇರೆ, ಕುಲಸಚಿವರು, ಕವಿಹಂ | : ಪದನಿಮಿತ್ತ ಕಾರ್ಯದರ್ಶಿ |

**ಸಭೆಯಲ್ಲಿ ಅನುಪಸ್ಥಿತರಿದ್ದವರು:**

| | |
|---|---|
| ೦೧. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು | : ಸದಸ್ಯರು |
| ೦೨. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಹಣಕಾಸು ಇಲಾಖೆ, ಬೆಂಗಳೂರು | : ಸದಸ್ಯರು |
| ೦೩. ಸರ್ಕಾರದ ಕಾರ್ಯದರ್ಶಿಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | : ಸದಸ್ಯರು |
| ೦೪. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | : ಸದಸ್ಯರು |
| ೦೫. ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು | : ಸದಸ್ಯರು |

ಸಭೆಯ ಆರಂಭದಲ್ಲಿ ಕುಲಸಚಿವರು ಕಾರ್ಯಕಾರಿ ಸಮಿತಿ ಸದಸ್ಯರನ್ನು ಸಭೆಗೆ ಸ್ವಾಗತಿಸಿದರು. ನಂತರ ಮಂಡಿಸಲಾದ ಕಾರ್ಯಸೂಚಿಯನ್ನು ಕುರಿತು ಚರ್ಚಿಸಿ ಈ ಕೆಳಕಂಡ ನಿರ್ಣಯಗಳನ್ನು ಕೈಗೊಳ್ಳಲಾಯಿತು.

ದಿನಾಂಕ : ೦೭.೦೧.೨೦೧೯ರಂದು ನಡೆದ ಕಾರ್ಯಕಾರಿ ಸಮಿತಿಯ ೧೯೮ನೇ ಸಭೆಯ ನಡೆವಳಿಗಳ ಸ್ಥಿರೀಕರಣ ಹಾಗೂ ಅನುಮೋದನೆ ನೀಡುವ ಕುರಿತು. (ಅನುಬಂಧ-೦೧)

**ನಿರ್ಣಯ :** ದಿನಾಂಕ ೦೭.೦೧.೨೦೧೯ರಂದು ನಡೆದ ಕಾರ್ಯಕಾರಿ ಸಮಿತಿಯ ೧೯೮ನೇ ಸಭೆಯ ನಡೆವಳಿಗಳನ್ನು ಸ್ಥಿರೀಕರಿಸಿ ಸಭೆ ಅನುಮೋದನೆ ನೀಡಿತು.

ದಿನಾಂಕ : ೦೭.೦೧.೨೦೧೯ರಂದು ನಡೆದ ಕಾರ್ಯಕಾರಿ ಸಮಿತಿಯ ೧೯೮ನೇ ಸಭೆಯ ನಡೆವಳಿಗಳ ಅನುಪಾಲನಾ ವರದಿಗೆ ಅನುಮೋದನೆ ನೀಡುವ ಕುರಿತು.(ಅನುಬಂಧ-೦೨)

**ನಿರ್ಣಯ :** ದಿನಾಂಕ ೦೭.೦೧.೨೦೧೯ರಂದು ನಡೆದ ಕಾರ್ಯಕಾರಿ ಸಮಿತಿಯ ೧೯೮ನೇ ಸಭೆಯ ನಡೆವಳಿಗಳ ಅನುಪಾಲನಾ ವರದಿಗೆ ಸಭೆ ಅನುಮೋದನೆ ನೀಡಿತು.

೧೯೯.೦೧ ದಿನಾಂಕ ೩೦.೦೧.೨೦೧೯ರಂದು ನಡೆಯಲಿರುವ ೨೭ನೇ ನುಡಿಹಬ್ಬ(ಘಟಿಕೋತ್ಸವದಲ್ಲಿ) ವಿದ್ಯಾರ್ಥಿಗಳು ಪಡೆಯುವ ವಿವಿಧ ಕೋರ್ಸ್‌ಗಳ ಪದವಿಗಳಿಗೆ ಅನುಮೋದನೆ ಕೋರಿದೆ.

**ನಿರ್ಣಯ :** ಸದರಿ ಅಂಶವನ್ನು ಪರಿಶೀಲಿಸಿದ ಸಭೆಯು ಈ ಕೆಳಗಿನ ಪದವಿಗಳಿಗೆ ಅನುಮೋದನೆ ನೀಡಿತು.

| | | |
|---|---|---|
| ೧. ಡಿ.ಲಿಟ್. | | - ೦೨ |
| ೨. ಪಿಎಚ್.ಡಿ | | - ೮೭ |
| ೩. ಎಂ.ಫಿಲ್ | | - ೨೬ |
| ೪. ಎಂ.ಎ.ಪಿಎಚ್.ಡಿ. | | - ೨೧ |
| ಕನ್ನಡ ಸಾಹಿತ್ಯ | - ೧೭ | |
| ಮಹಿಳಾ ಅಧ್ಯಯನ | - ೦೪ | |
| ೫. ಎಂ.ವಿ.ಎ | | - ೧೨ |
| ೬. ಎಂ.ಮ್ಯೂಜಿಕ್ | | - ೧೨ |
| ೭. ಬಿ.ಮ್ಯೂಜಿಕ್ | | - ೦೮ |
| ೮. ಸ್ನಾತಕೋತ್ತರ ಡಿಪ್ಲೊಮಾ | | - ೩೮ |
| ೯. ಡಿಪ್ಲೊಮಾ | | - ೫೯ |
| **ಒಟ್ಟು** | | **- ೨೬೫** ಪದವಿಗಳಿಗೆ |

ಹಾಗೂ ದೂರಶಿಕ್ಷಣ ನಿರ್ದೇಶನಾಲಯ ಮತ್ತು ಚಿತ್ರಕಲೆ ವಿಭಾಗದ ಪದವಿಗಳಿಗೆ ಅನುಮೋದನೆ ನೀಡಿತು.

೧೯೯.೦೨ ಕನ್ನಡ ವಿಶ್ವವಿದ್ಯಾಲಯದ ವಿಸ್ತರಣಾ ಕೇಂದ್ರವಾದ ಭರತೇಶ ಶಿಕ್ಷಣ ಸಂಸ್ಥೆ, ಬೆಳಗಾವಿ ಈ ಸಂಸ್ಥೆಯೊಂದಿಗೆ ಮಾಡಿಕೊಳ್ಳಬಹುದಾದ ಒಪ್ಪಂದ ಪತ್ರಕ್ಕೆ ಕಾರ್ಯಕಾರಿ ಸಮಿತಿ ಸಭೆಯ ಅನುಮೋದನೆ ಕೋರಿದೆ.

ನಿರ್ಣಯ : ವಿಸ್ತರಣಾ ಕೇಂದ್ರವಾದ ಭರತೇಶ ಶಿಕ್ಷಣ ಸಂಸ್ಥೆ, ಬೆಳಗಾವಿ ಈ ಸಂಸ್ಥೆಯೊಂದಿಗೆ ವಿಶ್ವವಿದ್ಯಾಲಯಕ್ಕೆ ಭಂಗಬಾರದಂತೆ ಕರಾರು ಒಪ್ಪಂದವನ್ನು ಮಾಡಿಕೊಳ್ಳಲು ಸಭೆ ಅನುಮೋದನೆ ನೀಡಿತು.

೧೯೯.೦೩ ಅಜಿಂ ಪ್ರೇಮ್ ಜಿ ವಿಶ್ವವಿದ್ಯಾಲಯ, ಬೆಂಗಳೂರು ಇವರೊಂದಿಗೆ ಮಾಡಿಕೊಳ್ಳಬಹುದಾದ ಒಪ್ಪಂದ ಪತ್ರಕ್ಕೆ ಕಾರ್ಯಕಾರಿ ಸಮಿತಿ ಸಭೆಯ ಅನುಮೋದನೆ ಕೋರಿದೆ.

ನಿರ್ಣಯ : ಅಜಿಂ ಪ್ರೇಮ್ ಜಿ ವಿಶ್ವವಿದ್ಯಾಲಯ, ಬೆಂಗಳೂರು ಇವರೊಂದಿಗೆ ವಿಶ್ವವಿದ್ಯಾಲಯಕ್ಕೆ ಭಂಗಬಾರದಂತೆ ಕರಾರು ಒಪ್ಪಂದವನ್ನು ಮಾಡಿಕೊಳ್ಳಲು ಸಭೆ ಅನುಮೋದನೆ ನೀಡಿತು.

೧೯೯.೦೪ ದಿನಾಂಕ ೩೦.೦೧.೨೦೧೯ ರಂದು ನಡೆಯಲಿರುವ ೨೭ನೇ ನುಡಿಹಬ್ಬದ (ಘಟಿಕೋತ್ಸವ), ವಿಚಾರಸಂಕಿರಣ ಹಾಗೂ ನಮ್ಮಹಬ್ಬದ ಕಾರ್ಯಕ್ರಮಗಳ ಪ್ರಕ್ರಿಯೆಗಳಿಗೆ ಹಾಗೂ ಇವುಗಳ ಖರ್ಚು ವೆಚ್ಚಗಳಿಗೆ ಸಭೆ ಅನುಮೋದನೆ ಕೋರಿದೆ.

ನಿರ್ಣಯ : ದಿನಾಂಕ ೩೦.೦೧.೨೦೧೯ ರಂದು ನಡೆಯಲಿರುವ ೨೭ನೇ ನುಡಿಹಬ್ಬದ ಘಟಿಕೋತ್ಸವ ಹಾಗೂ ನಮ್ಮಹಬ್ಬದ ಕಾರ್ಯಕ್ರಮಗಳ ಪ್ರಕ್ರಿಯೆಗಳಿಗೆ ಹಾಗೂ ಇವುಗಳ ಅಂದಾಜು ಖರ್ಚು ವೆಚ್ಚಗಳಿಗೆ ಸಭೆ ಅನುಮೋದನೆ ನೀಡಿತು.

೧೯೯.೦೫ ಮಾನ್ಯ ಕುಲಪತಿಯವರ ಆದೇಶ ಸಂಖ್ಯೆ ಕವಿಹಂ/ಕುಪ/ಕುಸನೇ/೨೦೧೮-೧೯/೪೮೦/೪೨೪ ಜನವರಿ ೧೨, ೨೦೧೯ರನ್ವಯ ಡಾ. ಅಶೋಕಕುಮಾರ ರಂಜೇರೆ, ಪ್ರಾಧ್ಯಾಪಕರು, ಕನ್ನಡ ಭಾಷಾಧ್ಯಯನ ವಿಭಾಗ ಇವರನ್ನು ಕಾರ್ಯಕಾರಿ ಸಮಿತಿ ಅನುಮೋದನೆ ನಿರೀಕ್ಷಿಸಿ ಕುಲಸಚಿವರನ್ನಾಗಿ ನಿಯೋಜಿಸಿರುವ ಕ್ರಮಕ್ಕೆ ಕಾರ್ಯಕಾರಿ ಸಮಿತಿಯ ಘಟನೋತ್ತರ ಅನುಮೋದನೆ ಕೋರಿದೆ.

ನಿರ್ಣಯ : ಡಾ. ಅಶೋಕಕುಮಾರ ರಂಜೇರೆ, ಪ್ರಾಧ್ಯಾಪಕರು, ಕನ್ನಡ ಭಾಷಾಧ್ಯಯನ ವಿಭಾಗ ಇವರನ್ನು ಕುಲಸಚಿವರನ್ನಾಗಿ ನಿಯೋಜಿಸಿರುವ ಕ್ರಮಕ್ಕೆ ಸಭೆ ಅನುಮೋದನೆ ನೀಡಿತು.

೧೯೯.೦೬ ಪೊಲೀಸ್ ಸರ್ಕಲ್ ಇನ್ಸ್‌ಪೆಕ್ಟರ್, ಕಂಪ್ಲಿ ವೃತ್ತ, ಕಂಪ್ಲಿ ಇವರು ದಿನಾಂಕ ೨೧.೦೧.೨೦೧೯ರ ಪತ್ರದ ಮೂಲಕ ಶ್ರೀ ಅಬ್ದುಲ್ ಹಕೀಂ ಸಲ್ಲಿಸಿರುವ ಖೊಟ್ಟಿ ಅಂಕಪಟ್ಟಿ ಕುರಿತಂತೆ ಯಾವ ರೀತಿ ಕ್ರಮಕೈಗೊಂಡಿರುತ್ತೀರಿ ಎಂಬ ಬಗ್ಗೆ ಮಾಹಿತಿಯನ್ನು ನೀಡಲು ಕೋರಿರುವ ಬಗ್ಗೆ.

ನಿರ್ಣಯ : ಸದರಿ ವಿಷಯ ಕುರಿತಂತೆ ಸಭೆಯು ಪರಿಶೀಲಿಸಿ ಶ್ರೀ ಅಬ್ದುಲ್ ಹಕೀಂ ಇವರಿಗೆ ಕನ್ನಡ ವಿಶ್ವವಿದ್ಯಾಲಯದಿಂದ ನೀಡಲಾಗಿರುವ ಪದವಿಗಳನ್ನು ಹಿಂಪಡೆದು ಸದರಿಯವರಿಗೆ ಮಾಹಿತಿ ನೀಡಿ ಈ ಕುರಿತು ಪತ್ರಿಕಾ ಪ್ರಕಟಣೆ ನೀಡುವುದರೊಂದಿಗೆ ಪೊಲೀಸ್ ಪ್ರಕರಣ ದಾಖಲಿಸಲು ಸಭೆ ನಿರ್ಣಯಿಸಿತು.

**ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು**

೧೯೯.೦೭ ವಿಜ್ಞಾನ ಸಂಗಾತಿ ಪ್ರಕಟಣೆ ಕುರಿತು.

ನಿರ್ಣಯ : ವಿಜ್ಞಾನ ಸಂಗಾತಿಯ ಎಂಟು ಸಂಪುಟಗಳ ಸಿದ್ಧತೆಗಾಗಿ ಸದ್ಯದ ಮಟ್ಟಿಗೆ ನಿಯೋಜಿತ ಕೆಲಸಗಳನ್ನು ಪೂರೈಸಲು ಒಬ್ಬ ಬೆರಳಚ್ಚುಗಾರರನ್ನು ನಿಯೋಜಿಸಲು ಸಭೆ ನಿರ್ಣಯಿಸಿತು.

೧೯೯.೦೮ ಜನಪದ ಕರ್ನಾಟಕ ಹಾಗೂ ವಿವಿಧ ವಿಭಾಗಗಳ ಪತ್ರಿಕೆಗಳ ಪ್ರಕಟಣೆಯ ಸಾಫ್ಟ್‌ಕಾಪಿ (ಡಿಟಿಪಿ ಕೆಲಸಕಾರ್ಯ)ಗಳ ಸಿದ್ಧತೆಯನ್ನು ವಿಭಾಗಗಳ ಮೂಲಕವೇ ಕೈಗೊಳ್ಳುವ ಕುರಿತು.

ನಿರ್ಣಯ : ಜನಪದ ಕರ್ನಾಟಕ ಹಾಗೂ ವಿವಿಧ ವಿಭಾಗಗಳ ಪತ್ರಿಕೆಗಳ ಪ್ರಕಟಣೆಯ ಡಿಟಿಪಿ ಕೆಲಸಕಾರ್ಯಗಳ ಸಿದ್ಧತೆ ಹಾಗೂ ಇವುಗಳ ಪಾವತಿಗಳನ್ನು ಕೂಡಾ ಸಂಪಾದಕರು ಅಥವಾ ವಿಭಾಗಗಳ ಮೂಲಕವೇ ಕ್ರಮಕೈಗೊಳ್ಳಲು ಅನುಕೂಲತೆಯನ್ನು ಕಲ್ಪಿಸಲು ಸಭೆ ತೀರ್ಮಾನಿಸಿತು.

೧೯೯.೦೯ ಕನ್ನಡ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಪಡೆಯುತ್ತಿರುವ ಫೆಲೋಶಿಪ್‌ಗಳ ಕುರಿತು.

ನಿರ್ಣಯ : ಪಿಎಚ್.ಡಿ ಪ್ರವೇಶಾತಿ ಸಂದರ್ಭದಲ್ಲಿ ರೂ. ೧೦೦೦/- (ಒಂದು ಸಾವಿರ ರೂ ಮಾತ್ರ)ಗಳನ್ನು ಇಡುಗಂಟಾಗಿ ಪಡೆಯುವುದು ಹಾಗೂ ಈ ಮೊತ್ತವನ್ನು ಹಿಂದಿರುಗಿಸುವಂತಿಲ್ಲ. ಹಾಸ್ಟೆಲ್‌ನ ವಿದ್ಯಾರ್ಥಿಗಳಿಗೆ ಸರ್ಕಾರದ ಸವಲತ್ತುಗಳನ್ನು ಮಾತ್ರ ನೀಡುವುದು ಹಾಗೂ ವಿದ್ಯಾರ್ಥಿಗಳಿಂದ ಈ ಕುರಿತಂತೆ ಒಪ್ಪಿಗೆ ಪತ್ರವನ್ನು ಪಡೆಯುವುದು. ವಿಶ್ವವಿದ್ಯಾಲಯದ ಎಲ್ಲಾ ವರ್ಗಗಳ ವಿದ್ಯಾರ್ಥಿಗಳು ಒಳಗೊಂಡಂತೆ ಯಾವ ಯಾವ ಇಲಾಖೆಯಿಂದ ಶಿಷ್ಯವೇತನವನ್ನು ಪಡೆಯುತ್ತಿದ್ದಾರೆ ಎನ್ನುವ ಮಾಹಿತಿಯನ್ನು ಪಡೆದು ಸೂಕ್ತಕ್ರಮವಹಿಸಲು ಸಭೆ ನಿರ್ಣಯಿಸಿತು.

೧೯೯.೧೦ ತಾಂತ್ರಿಕ ವಿಭಾಗದ ಕಾಮಗಾರಿಗಳಿಗೆ ಸಂಬಂಧಿಸಿದ ನಷ್ಟದ ಮೊತ್ತವನ್ನು ಅಭಿಯಂತರರ ವೇತನದಿಂದ ಕಡಿತಗೊಳಿಸುತ್ತಿರುವುದನ್ನು ತಡೆಹಿಡಿಯಲು ಅಭಿಯಂತರರು ಮನವಿ ಸಲ್ಲಿಸಿರುವ ಬಗ್ಗೆ.

ನಿರ್ಣಯ : ಸದರಿ ಅಂಶವನ್ನು ನ್ಯಾಯಾಧೀಶರು ಮತ್ತು ಮೂರನೆ ಪಾರ್ಟಿ ನೀಡಿದ ವರದಿಯನ್ನು ಸಭೆಯು ಪರಿಶೀಲಿಸಿ ತಾಂತ್ರಿಕ ವಿಭಾಗದ ಅಭಿಯಂತರರ ವೇತನದಲ್ಲಿ ಈವರೆಗೆ ಕಡಿತಗೊಳಿಸಿದ ಮೊತ್ತವನ್ನು ದಂಡವೆಂದು ಪರಿಗಣಿಸಿ ಇನ್ನು ಮುಂದೆ ಜನವರಿ ೨೦೧೯ರಿಂದ ಅನ್ವಯವಾಗುವಂತೆ ಕಡಿತಗೊಳಿಸದಿರಲು ಸಭೆ ನಿರ್ಣಯಿಸಿ, ಭರವಸೆ ಸಮಿತಿ (ದಿನಾಂಕ 28.09.2016/ಭರವಸೆಗಳ ಸಮಿತಿ/(4) 01.00/ಎಲ್.ಎಂ(ಎಸ್.ಕೆ.)/ಆರ್ಎನ್, ಭರವಸೆಗಳ ಸಂಖ್ಯೆ 4610/2013) ನಿರ್ಣಯದಂತೆ ಈ ಪ್ರಕರಣವನ್ನು ಮುಕ್ತಾಯಗೊಳ್ಳಿಸಲು ಸಭೆ ತೀರ್ಮಾನಿಸಿತು.

೧೯೯.೧೧ ತೋಟಗಾರಿಕೆ ವಿಭಾಗದ ನಿರ್ವಹಣೆಗಾಗಿ ತಾತ್ಕಾಲಿಕ ಸಿಬ್ಬಂದಿಗಳ ನಿಯೋಜನೆ ಕುರಿತು.

ನಿರ್ಣಯ : ಈ ಕುರಿತಂತೆ ಸಭೆಯು ಪರಿಶೀಲಿಸಿ ಸದ್ಯ ಕಾರ್ಯನಿರ್ವಹಿಸುತ್ತಿರುವ ೧೦ ರಿಂದ ೧೫ ಜನ ರಕ್ಷಣಾ ಮತ್ತು ಸ್ವಚ್ಛತಾ ಸಿಬ್ಬಂದಿಯನ್ನು ತೋಟಗಾರಿಕೆ ನಿರ್ವಹಣೆಗಾಗಿ ನಿಯೋಜಿಸಿಕೊಳ್ಳಲು ಸಭೆ ತೀರ್ಮಾನಿಸಿತು.
ಹಾಗೂ ಹೊಸದಾಗಿ ಟೆಂಡರ್/ಏಜೆನ್ಸಿ ಮೂಲಕ ನಿಯಮಾನುಸಾರ ರಕ್ಷಣಾ ಮತ್ತು ಸ್ವಚ್ಛತಾ ಸಿಬ್ಬಂದಿಯನ್ನು ನಿಯೋಜಿಸಲು ಸಭೆ ಅನುಮೋದನೆ ನೀಡಿತು.

೧೯೯.೧೨ ಹೊಸಪೇಟೆ ನಗರಾಭಿವೃದ್ಧಿ ಪ್ರಾಧಿಕಾರದಿಂದ ಪಡೆಯಲಾಗಿರುವ ನಿವೇಶನದಲ್ಲಿ ವಿಶ್ವವಿದ್ಯಾಲಯದ ಅತಿಥಿಗೃಹ ನಿರ್ಮಾಣ ಕಾರ್ಯವನ್ನು ಆರಂಭಿಸಲು ಹಂಪಿ ಪ್ರಾಧಿಕಾರ ಹೊಸಪೇಟೆ ಇವರಿಂದ ನಿರಾಕ್ಷೇಪಣೆ ಮತ್ತು ಅನುಮತಿ ಪತ್ರವನ್ನು ಪಡೆಯುವ ಕಾರ್ಯವನ್ನು ನಿರ್ವಹಿಸಲು ಅಧಿಕಾರಿಯನ್ನು ನಿಯೋಜಿಸುವ ಕುರಿತು.

ನಿರ್ಣಯ : ಹೊಸಪೇಟೆ ನಗರಾಭಿವೃದ್ಧಿ ಪ್ರಾಧಿಕಾರದಿಂದ ಪಡೆಯಲಾಗಿರುವ ನಿವೇಶನದಲ್ಲಿ ವಿಶ್ವವಿದ್ಯಾಲಯದ ಅತಿಥಿಗೃಹ ನಿರ್ಮಾಣ ಕಾರ್ಯವನ್ನು ಆರಂಭಿಸಲು ಹಂಪಿ ಪ್ರಾಧಿಕಾರ ಹೊಸಪೇಟೆ ಇವರಿಂದ ನಿರಾಕ್ಷೇಪಣೆ ಮತ್ತು ಅನುಮತಿ ಪತ್ರವನ್ನು ಪಡೆಯುವ ಕಾರ್ಯವನ್ನು ನಿರ್ವಹಿಸಲು ಉಪಕುಲಸಚಿವರು (ಆಡಳಿತ) ಅಥವಾ ಸಹಾಯಕ ಕುಲಸಚಿವರು (ನಿರ್ವಹಣೆ) ಇವರನ್ನು ನಿಯೋಜಿಸಲು ಸಭೆ ನಿರ್ಣಯಿಸಿತು.

೧೯೯.೧೩ ಲಲಿತಕಲೆಗಳ ನಿಕಾಯದ ಡೀನ್‌ರ ನಿಯೋಜನೆ ಕುರಿತು.

ನಿರ್ಣಯ : ಸದರಿ ಅಂಶವನ್ನು ಪರಿಶೀಲಿಸಿದ ಸಭೆಯು ಲಲಿತಕಲೆಗಳ ನಿಕಾಯದ ಡೀನ್‌ರನ್ನಾಗಿ ಕೂಡಲೇ ಜಾರಿಗೆ ಬರುವಂತೆ ಡಾ. ಡಿ.ಪಾಂಡುರಂಗಬಾಬು, ಪ್ರಾಧ್ಯಾಪಕರು, ಕನ್ನಡ ಭಾಷಾಧ್ಯಯನ ವಿಭಾಗ ಇವರನ್ನು ನಿಯೋಜಿಸಲು ಸಭೆ ನಿರ್ಣಯಿಸಿತು.

೧೯೯.೧೪ ಸಬಾಟಿಕಲ್ ರಜೆ ಪಡೆದ ಅಧ್ಯಾಪಕರಿಂದ ನಿಯೋಜಿತ ಯೋಜನೆಗಳು ವಿಶ್ವವಿದ್ಯಾಲಯಕ್ಕೆ ಸಲ್ಲಿಸುವ ಕುರಿತು.

ನಿರ್ಣಯ : ಸಬಾಟಿಕಲ್ ರಜೆ ಪಡೆದ ಅಧ್ಯಾಪಕರು ಪಡೆದ ರಜೆ ಅವಧಿಯಲ್ಲಿ ನಿಯಮಾನುಸಾರ ಪೂರೈಸಬೇಕಾದ ಯೋಜನೆಗಳನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸಬೇಕು. ಸಲ್ಲಿಸದಿದ್ದ ಅಧ್ಯಾಪಕರ ಮೇಲೆ ನಿಯಮಾನುಸಾರ ಕ್ರಮವಹಿಸಲು ಸಭೆ ಸೂಚಿಸಿತು.

೧೯೯.೧೫ ಕನ್ನಡ ವಿಶ್ವವಿದ್ಯಾಲಯದ ಆವರಣದಲ್ಲಿ ಉಚಿತವಾಗಿ ಕುರಿ ಮೇಯಿಸಲು ಅವಕಾಶ ಕೋರಿ ಸಲ್ಲಿಸಿದ ಮನವಿ ಪತ್ರ ಕುರಿತು.

ನಿರ್ಣಯ : ಕನ್ನಡ ವಿಶ್ವವಿದ್ಯಾಲಯದ ಆವರಣದಲ್ಲಿ ಕುರಿಗಳನ್ನು ಮೇಯಿಸಲು ಅವಕಾಶ ಕೋರಿ ಸಲ್ಲಿಸಿದ ಮನವಿಯನ್ನು ಪರಿಶೀಲಿಸಿದ ಸಮಿತಿ ಸಭೆಯು ವಿಶ್ವವಿದ್ಯಾಲಯದ ಆವರಣದಲ್ಲಿ ಕುರಿಗಳನ್ನು ಮೇಯಿಸುವುದರಿಂದ ಗಿಡ ಮರಗಳಿಗೆ ಅನುಕೂಲವಾಗುವ ಹಿನ್ನೆಲೆಯಲ್ಲಿ ವಿಶ್ವವಿದ್ಯಾಲಯದ ಯಾವುದೇ ಗಿಡ ಮರಗಳಿಗೆ ಮತ್ತು ಇತರೆ ವಸ್ತುಗಳಿಗೆ ಹಾನಿಯಾಗದಂತೆ ಸದರಿಯವರು ನೋಡಿಕೊಳ್ಳುವ ಷರತ್ತಿನೊಂದಿಗೆ ಉಚಿತವಾಗಿ ಕುರಿ ಮೇಯಿಸಲು ಅವಕಾಶ ಕಲ್ಪಿಸಲು ಸಭೆ ನಿರ್ಣಯಿಸಿತು.

ಕುಲಸಚಿವರ ವಂದನೆಗಳೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಕುಲಸಚಿವರು
ಪದನಿಮಿತ್ತ ಕಾರ್ಯದರ್ಶಿ

ಕುಲಪತಿಗಳು
ಅಧ್ಯಕ್ಷರು